# ಕಡು ಮೌನಿ ನರಹರಿ

ಸಕಲೇಶಪುರ ಪಟ್ಟಣದ ಸರಹದ್ದಿನಲ್ಲಿರುವ ಆನೆಮಹಲ್ ಎಂಬಲ್ಲಿ ಐದು ಎಕರೆ ವಿಸ್ತೀರ್ಣದ ಖಾಲಿ ಜಾಗವನ್ನು ಖರೀದಿಸಿ, ಒಂದು ಭವ್ಯವಾದ ಬಂಗಲೆಯಂಥ ಮನೆಯನ್ನು ಕಟ್ಟಿಕೊಂಡು, ಅದರಲ್ಲಿ ಇದ್ದೇನೆ ಇಲ್ಲ ಎಂಬಂತೆ ವಾಸವಾಗಿದ್ದು, ಸ್ವಲ್ಪ ಹಳೆಯದಾದ ಒಂದು ಸಾಮಾನ್ಯ ಮಾರುತಿ ಒಮ್ನಿಯಲ್ಲಿ ತೀರಾ ಅಗತ್ಯವಾದ ಸಾಮಗ್ರಿಗಳಿಗಾಗಿ ಮಾತ್ರ ಕಾರಿನಲ್ಲಿ ಸಕಲೇಶಪುರ ಪಟ್ಟಣಕ್ಕೆ ಹೋಗಿ ಬರುವ ಆ ಮನುಷ್ಯನಿಗೆ ಜನಸಂಪರ್ಕ ಎಂಬುದು ಇರಲಿಲ್ಲ. ಆತ ಯಾರ ಮುಖವನ್ನೂ ನೋಡುತ್ತಿರಲಿಲ್ಲ. ಯಾರ ಬಳಿಯೂ ಮಾತಾಡುತ್ತಿರಲಿಲ್ಲ. ಮನೆ ಕಟ್ಟಲು ಆತ ತನಗೆ ಬಹಳ ಆತ್ಮೀಯನೂ ನಂಬಿಗಸ್ಥನೂ ಆದ ಒಬ್ಬ ಇಂಜಿನಿಯರನ್ನು ಎಲ್ಲಿಂದಲೋ ಕರೆದು ಕೊಂಡು ಬಂದು ಮನೆ  ಕಟ್ಟುವ ಸಕಲ ಸವಾಬ್ದಾರಿಯನ್ನೂ ಆತನಿಗೆ ವಹಿಸಿದ್ದ ಎಂದು ಮಾತ್ರ ಜನರಿಗೆ ಗೊತ್ತಿತ್ತು. ಆ ಇಂಜಿನಿಯರ್ ಮಹಾದೇವ  ಮಹಾರಾಷ್ಟ್ರದವನಾಗಿದ್ದು ಬಹುತೇಕ ಮೌನವಾಗಿಯೇ ಇರುತ್ತಿದ್ದ. ಅದಕ್ಕೆ ಕಾರಣ ಆತನಿಗೆ ಕನ್ನಡದ ಗಂಧ ಗಾಳಿ

